## ಹಂತ : 5(ಎ) 8 ನೆಯ ತರಗತಿ ಎರಡನೆಯ ಸಂಕಲನಾತ್ಮಕ ಮೌಲ್ಯಾಂಕನ – 2024–25 ಪ್ರಥಮ ಭಾಷೆ ಕನ್ನಡ ಪ್ರಶ್ನೆ ಪತ್ರಿಕೆಯ ನೀಲನಕಾಶೆ

| ಕ್ರ. ಸಂ | ಪಾಠದ ಹೆಸರು | ಜ್ಞಾನ / ಸ್ಮರಣೆ | | | | ಗ್ರಹಿಕೆ | | | | | ಅಭಿವ್ಯಕ್ತಿ | | | | ಪ್ರಶಂಸೆ | ಒಟ್ಟು | | | | | | ಅಂಕಗಳು | ಪ್ರಶ್ನೆಗಳ ಸಂಖ್ಯೆ |
|---|---|---|---|---|---|---|---|---|---|---|---|---|---|---|---|---|---|---|---|---|---|---|---|
| | | ವ. ನಿ. | ಕಿ. ಉ. 1 | ಕಿ. ಉ. 2 | ದೀ. ಉ. 1 | ವ. ನಿ | ಕಿ. ಉ. 1 | ಕಿ. ಉ. 2 | ದೀ ಉ.1 | ದೀ. ಉ. 2 | ಕಿ. ಉ. 2 | ದೀ. ಉ. 1 | ದೀ. ಉ. 2 | ದೀ. ಉ. 3 | ಕಿ. ಉ. 2 | ವ. ನಿ | ಕಿ. ಉ. 1 | ಕಿ. ಉ. 2 | ದೀ. ಉ. 1 | ದೀ. ಉ. 2 | ದೀ. ಉ. 3 | | |
| 1 | ಮಗ್ಗದ ಸಾಹೇಬ | ** | 1(1) | ** | ** | ** | ** | ** | ** | ** | ** | ** | ** | ** | ** | ** | 1(1) | ** | ** | ** | ** | 01 | 01 |
| 2 | ಸಾರ್ಥಕ ಬದುಕಿನ ಸಾಧಕ | ** | 1(1) | ** | ** | ** | ** | ** | ** | ** | ** | ** | ** | ** | ** | ** | 1(1) | ** | ** | ** | ** | 01 | 01 |
| 3 | ನೀರು ಕೊಡದ ನಾಡಿನಲ್ಲಿ | ** | 1(1) | ** | ** | ** | ** | ** | ** | ** | ** | ** | ** | ** | ** | ** | 1(1) | ** | ** | ** | ** | 01 | 01 |
| 4 | ಯಶೋಧರೆ | ** | ** | ** | ** | ** | ** | 1(2) | ** | ** | ** | ** | ** | ** | ** | ** | ** | 1(2) | ** | ** | ** | 02 | 01 |
| 5 | ಹೂವಾದ ಹುಡುಗಿ | ** | ** | ** | ** | ** | ** | 1(2) | ** | ** | ** | ** | ** | ** | ** | ** | ** | 1(2) | ** | ** | ** | 02 | 01 |
| 6 | ತಲಕಾಡಿನ ವೈಭವ | ** | ** | ** | ** | ** | ** | 1(2) | ** | ** | ** | ** | ** | ** | ** | ** | ** | 1(2) | * | ** | ** | 02 | 01 |
| 7 | ಅಮ್ಮ | ** | ** | ** | ** | ** | ** | ** | ** | ** | 1(2) | ** | ** | ** | ** | ** | ** | 1(2) | ** | ** | ** | 02 | 01 |
| 8 | ಸಪ್ತಾಕ್ಷರೀ ಮಂತ್ರ | ** | ** | ** | ** | ** | ** | ** | ** | ** | ** | 1(3) | ** | ** | ** | ** | ** | ** | 1(3) | ** | ** | 03 | 01 |
| | **ಗದ್ಯ ಒಟ್ಟು** | * | **3(1)** | ** | ** | ** | ** | **3(2)** | ** | ** | 1(2) | **1(3)** | ** | ** | ** | ** | **3(1)** | **4(2)** | **1(3)** | ** | ** | **14** | **08** |
| 1 | ಕನ್ನಡಿಗರ ತಾಯಿ | ** | 1(1) | ** | ** | ** | ** | ** | ** | ** | ** | ** | ** | ** | ** | ** | 1(1) | ** | ** | ** | ** | 01 | 01 |
| 2 | ಭಾರತೀಯತೆ | ** | ** | 1(2) | ** | ** | ** | ** | ** | ** | ** | ** | ** | ** | ** | ** | ** | 1(2) | ** | ** | ** | 02 | 01 |
| 3 | ಬೇವು ಬೆಲ್ಲದೊಳಿಡಲೇನು ಫಲ | ** | ** | ** | ** | ** | ** | ** | ** | ** | ** | ** | ** | ** | 1(2) | ** | ** | 1(2) | ** | ** | ** | 02 | 01 |
| 4 | ಸೋಮೇಶ್ವರ ಶತಕ | ** | 1(1) | ** | ** | ** | ** | ** | ** | ** | ** | ** | ** | ** | ** | ** | 1(1) | ** | ** | ** | ** | 01 | 01 |
| 5 | ಬಹುಮಾನ | ** | ** | ** | ** | ** | ** | 1(2) | ** | ** | ** | ** | ** | ** | ** | ** | ** | 1(2) | ** | ** | ** | 02 | 01 |
| 6 | ಗೆಳೆತನ | ** | ** | ** | ** | ** | ** | ** | ** | ** | ** | 1(3) | ** | ** | ** | ** | ** | ** | 1(3) | ** | ** | 03 | 01 |
| 7 | ವಚನಾಮೃತ | ** | ** | ** | ** | ** | ** | 1(2) | ** | ** | ** | ** | ** | ** | ** | ** | ** | 1(2) | ** | ** | ** | 02 | 01 |
| 8 | ರಾಮಧಾನ್ಯ ಚರಿತೆ | ** | ** | ** | ** | ** | ** | ** | ** | ** | 1(2) | ** | ** | ** | ** | ** | ** | 1(2) | ** | ** | ** | 02 | 01 |
| | **ಪದ್ಯ ಒಟ್ಟು** | * | **2(1)** | 1(2) | ** | ** | ** | **2(2)** | ** | ** | 1(2) | **1(3)** | ** | ** | 1(2) | ** | **2(1)** | **5(2)** | **1(3)** | ** | ** | **15** | **08** |
| 1 | ಸಾರ್ಥಕ | ** | ** | ** | ** | ** | ** | ** | ** | ** | ** | ** | ** | ** | ** | ** | ** | ** | ** | ** | ** | ** | ** |
| 2 | ಆಹುತಿ | ** | ** | ** | ** | ** | ** | ** | ** | ** | ** | ** | ** | ** | ** | ** | ** | ** | ** | ** | ** | ** | ** |
| 3 | ಮಗಳಿಗೆ ಬರೆದ ಪತ್ರ | ** | ** | ** | ** | ** | ** | ** | ** | ** | ** | ** | ** | ** | ** | ** | ** | ** | ** | ** | ** | ** | ** |
| 4 | ಕಟ್ಟುವೆವು ನಾವು | ** | 1(1) | ** | ** | ** | ** | ** | ** | ** | ** | ** | ** | ** | ** | ** | 1(1) | ** | ** | ** | ** | 01 | 01 |
| 5 | ಆಟೋರಿಕ್ಷಾದ ರಸಪ್ರಸಂಗಗಳು | ** | ** | ** | ** | ** | ** | 1(2) | ** | ** | ** | ** | ** | ** | ** | ** | ** | 1(2) | ** | ** | ** | 02 | 01 |
| 6 | ಸೀಮೆ | ** | 1(1) | ** | ** | ** | ** | ** | ** | ** | ** | ** | ** | ** | ** | ** | 1(1) | ** | ** | ** | ** | 01 | 01 |
| | **ಪಠ್ಯಪೋಷಕ ಅಧ್ಯಯನ ಒಟ್ಟು** | * | **2(1)** | ** | ** | ** | ** | **1(2)** | ** | ** | ** | ** | ** | ** | ** | ** | **2(1)** | **1(2)** | ** | ** | ** | **04** | **03** |

**ಸೂಚನೆ :– ಆವರಣದ ಹೊರಗಿನ ಸಂಖ್ಯೆಯು ಪ್ರಶ್ನೆಗಳನ್ನು ಹಾಗೂ ಒಳಗಿರುವ ಸಂಖ್ಯೆಯು ಅಂಕಗಳನ್ನು ಸೂಚಿಸುತ್ತದೆ.**

*****

| ಕ್ರ. ಸಂ | ಪಾಠದ ಹೆಸರು | ಜ್ಞಾನ / ಸ್ಮರಣೆ | | | | ಗ್ರಹಿಕೆ | | | | | ಅಭಿವ್ಯಕ್ತಿ | | | | ಪ್ರಶಂಸೆ | ಒಟ್ಟು | | | | | | ಅಂಕಗಳು | ಪ್ರಶ್ನೆಗಳ ಸಂಖ್ಯೆ |
|---|---|---|---|---|---|---|---|---|---|---|---|---|---|---|---|---|---|---|---|---|---|---|---|
| | | ವ. ನಿ. | ಕಿ. ಉ. 1 | ಕಿ. ಉ. 2 | ದೀ. ಉ. 1 | ವ. ನಿ | ಕಿ. ಉ. 1 | ಕಿ. ಉ. 2 | ದೀ ಉ.1 | ದೀ. ಉ. 2 | ಕಿ. ಉ. 2 | ದೀ. ಉ. 1 | ದೀ. ಉ. 2 | ದೀ. ಉ. 3 | ಕಿ. ಉ. 2 | ವ. ನಿ | ಕಿ. ಉ. 1 | ಕಿ. ಉ. 2 | ದೀ. ಉ. 1 | ದೀ. ಉ. 2 | ದೀ. ಉ. 3 | | |
| 1 | **ಅಪಠಿತ ಗದ್ಯ** | ** | ** | ** | ** | ** | ** | 1(2) | ** | ** | ** | ** | ** | ** | ** | ** | ** | 1(2) | ** | ** | ** | **02** | **01** |
| 1 | ಛಂದಸ್ಸು / ಅಲಂಕಾರ | ** | ** | ** | ** | ** | ** | ** | 1(3) | ** | ** | ** | ** | ** | ** | ** | ** | ** | 1(3) | ** | ** | 03 | 01 |
| 2 | ಗಾದೆ ವಿಸ್ತರಣೆ | ** | ** | ** | ** | ** | ** | ** | ** | ** | ** | 1(3) | ** | ** | ** | ** | ** | ** | 1(3) | ** | ** | 03 | 01 |
| 3 | ಪತ್ರಲೇಖನ ಪ್ರಬಂಧ ಲೇಖನ | ** | ** | ** | ** | ** | ** | ** | ** | ** | ** | ** | 1(4) | ** | ** | ** | ** | ** | ** | 1(4) | ** | 04 | 01 |
| 4 | ವ್ಯಾಕಣಾಂಶಗಳು | 03(1)) | ** | ** | ** | 2(1) | ** | ** | ** | ** | ** | ** | ** | ** | ** | 5(1) | ** | ** | ** | ** | ** | 05 | 05 |
| | **ವ್ಯಾಕರಣ, ಛಂದಸ್ಸು, ಅಲಂಕಾರ, ವಾಕ್ಯ ರಚನೆ ಒಟ್ಟು** | 03(1) | ** | ** | ** | 2(1) | ** | ** | 1(3) | ** | ** | ** | 1(4) | ** | ** | 5(1) | ** | 1(2) | 2(3) | 1(4) | ** | **15** | **08** |
| | **ಸಮಗ್ರ ಒಟ್ಟು** | 03(1) | 7(1) | 1(2) | ** | 2(1) | ** | 7(2) | 1(3) | ** | 2(2) | 3(3) | 1(4) | ** | 1(2) | 5(1) | 7(1) | 11(2) | 4(3) | 1(4) | ** | **50** | **28** |
| | | 12 – 11 | | | | 19 – 10 | | | | | 17 – 06 | | | | 2 – 1 | 50 – 28 | | | | | | | |

**ಸೂಚನೆ :– ಆವರಣದ ಹೊರಗಿನ ಸಂಖ್ಯೆಯು ಪ್ರಶ್ನೆಗಳನ್ನು ಹಾಗೂ ಒಳಗಿರುವ ಸಂಖ್ಯೆಯು ಅಂಕಗಳನ್ನು ಸೂಚಿಸುತ್ತದೆ.**

# 8 ನೆಯ ತರಗತಿ ಎರಡನೆಯ ಸಂಕಲನಾತ್ಮಕ ಮೌಲ್ಯಾಂಕನ – 2024–25

## ವಿಷಯ : ಪ್ರಥಮ ಭಾಷೆ ಕನ್ನಡ – ಪ್ರಶ್ನೆ ಪತ್ರಿಕೆ

**ಒಟ್ಟು ಪ್ರಶ್ನೆಗಳ ಸಂಖ್ಯೆ : 28** | **ವಿಷಯ ಸಂಕೇತ : 01K**

**ಸಮಯ : 01 – 45 ಗಂಟೆಗಳು** | **ಗರಿಷ್ಠ ಅಂಕಗಳು : 50**

---

**I. ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಆಯ್ಕೆಗಳನ್ನು ಕೊಡಲಾಗಿದೆ. ಅವುಗಳಲ್ಲಿ ಹೆಚ್ಚು ಸೂಕ್ತವಾದ ಉತ್ತರವನ್ನು ಆರಿಸಿ, ಕ್ರಮಾಕ್ಷರದೊಂದಿಗೆ ಬರೆಯಿರಿ.** **3*1=3**

1. ಕನ್ನಡ ವರ್ಣಮಾಲೆಯಲ್ಲಿರುವ ಒಟ್ಟು ಅಕ್ಷರಗಳ ಸಂಖ್ಯೆ;
   ಎ) 34 ಬಿ) 49
   ಸಿ) 25 ಡಿ) 09
2. ಇವುಗಳಲ್ಲಿ ಆದೇಶ ಸಂಧಿಗೆ ಉದಾಹರಣೆಯಾದ ಪದವಿದು;
   ಎ) ಹುಲ್ಲುಗಾವಲು ಬಿ) ಪುಸ್ತಕವನ್ನು
   ಸಿ) ನಿಲ್ಮನೆಯನ್ನು ಡಿ) ಬಾನಿನೆಡೆ
3. 'ಬೆಟ್ಟದಾವರೆ' ಪದವು ಈ ಸಮಾಸಕ್ಕೆ ಉದಾಹರಣೆಯಾಗಿದೆ;
   ಎ) ಕರ್ಮಧಾರಯ ಬಿ) ದ್ವಿಗು
   ಸಿ) ತತ್ಪುರುಷ ಡಿ) ದ್ವಂದ್ವ

**II. ಕೆಳಗಿನ ಪ್ರಶ್ನೆಗಳಿಗೆ ಮೊದಲೆರಡು ಪದಗಳಿಗಿರುವ ಸಂಬಂಧದಂತೆ ಮೂರನೆಯ ಪದಕ್ಕೆ ಸರಿಹೊಂದುವ ಸಂಬಂಧೀ ಪದವನ್ನು ಬರೆಯಿರಿ.** **2*1=2**

4. ಗಣೇಶ : ಅಂಕಿತನಾಮ : : ಪಂಡಿತ : ___
5. ವರ್ಷ : ವರುಸ : : ಪುಣ್ಯ : _____

**III. ಕೆಳಗಿನ ಪ್ರಶ್ನೆಗಳಿಗೆ ಪ್ರತಿಯೊಂದಕ್ಕೂ ಒಂದೊಂದು ವಾಕ್ಯದಲ್ಲಿ ಉತ್ತರ ಬರೆಯಿರಿ.** **7*1=7**

6. ರಹೀಮನು ಮಗ್ಗವನ್ನು ಮುಟ್ಟದೆ ಎಷ್ಟು ವರ್ಷಗಳಾಗಿತ್ತು?
7. ಡಿವಿಜಿ ಅವರ ಮನಸ್ಸಿನ ಮೇಲೆ ಪ್ರಭಾವವನ್ನು ಬೀರಿದವರು ಯಾರು?
8. ವಿದೇಶಗಳಲ್ಲಿ ನೀರಿಗಿಂತ ಅಗ್ಗವಾಗಿ ಸಿಗುವುದೇನು?
9. ಕನ್ನಡ ತಾಯಿಯ ಬಸಿರ ಹೊನ್ನಗನಿ ಯಾರು?
10. ಆಲದ ಮರದ ಬೀಜ ಸಿಡಿದು ಭೂಮಿಗೆ ಬಿದ್ದು ಏನಾಗುತ್ತದೆ?
11. ನಮ್ಮೆದೆಯ ಕಾಮಧೇನು ಯಾವುದು?
12. ಮುದುಕಿಯನ್ನು ಭೇಟಿಯಾದ ವ್ಯಕ್ತಿ ಯಾರು?

**IV. ಕೆಳಗಿನ ಪ್ರಶ್ನೆಗಳಿಗೆ ಮೂರು ನಾಲ್ಕು ವಾಕ್ಯಗಳಲ್ಲಿ ಉತ್ತರ ಬರೆಯಿರಿ.** **5*2=10**

13. ಅರಮನೆಗೆ ಹೂವು ಎಲ್ಲಿಂದ ಬರುತ್ತದೆ ಎಂದು ದೊರೆಮಗನು ಹೇಗೆ ಕಂಡು ಹಿಡಿದನು?
14. ಚಾವುಂಡರಾಯ ಯಾರು? ಆತನ ವಿಶೇಷತೆಯೇನು?
15. ಕೋಗಿಲೆಯ ಗಾನಕ್ಕೆ ಪ್ರಕೃತಿಯು ಹೇಗೆ ಸ್ಪಂದಿಸಿತು?
16. ಆಯ್ದಕ್ಕಿ ಮಾರಯ್ಯನು ಕಾಯಕದ ಮಹತ್ತ್ವವನ್ನು ಹೇಗೆ ನಿರೂಪಿಸಿದ್ದಾನೆ?
17. ಲೇಖಕರಾದ ಶ್ರೀ ಎಚ್. ನರಸಿಂಹಯ್ಯ ಅವರಿಗೆ ವಿಮಾನಯಾನದ ಬಗ್ಗೆ ಭಯವಿಲ್ಲವೇಕೆ?

**V. ಕೆಳಗಿನ ಕವಿ/ಸಾಹಿತಿಗಳ ಸ್ಥಳ, ಕಾಲ, ಕೃತಿ ಮತ್ತು ಪ್ರಶಸ್ತಿಗಳನ್ನು ಕುರಿತು ವಾಕ್ಯರೂಪದಲ್ಲಿ ಬರೆಯಿರಿ.** **1*2=2**

18. ಮಾಸ್ತಿ ವೆಂಕಟೇಶ ಅಯ್ಯಂಗಾರ್

**VI. ಕೆಳಗಿನ ಪದ್ಯ ಭಾಗಕ್ಕೆ ಪ್ರಸ್ತಾರ ಹಾಕಿ, ಗಣ ವಿಭಾಗಿಸಿ, ಛಂದಸ್ಸಿನ ಹೆಸರನ್ನು ಬರೆಯಿರಿ.** **1*3=3**

**19. ಕೆಲರು ಗೋದಿಯ ಸಾಮೆಯನು ಕೆಲ**
**ಕೆಲರು ನವಣೆಯ ಕಂಬು ಜೋಳವ**
**ಕೆಲರು ಹಾರಕವೆಂದು ಕೆಲವರು ನೆಲ್ಲನತಿಶಯವ ।**

**ಅಥವಾ**

**ಕೆಳಗಿನ ವಾಕ್ಯದಲ್ಲಿರುವ ಅಲಂಕಾರವನ್ನು ಹೆಸರಿಸಿ, ಲಕ್ಷಣ ಬರೆದು, ಸಮನ್ವಯಗೊಳಿಸಿರಿ.**

ಸೀತೆಯ ಮುಖ ಕಮಲದಂತೆ ಅರಳಿತು.

**VII. ಕೆಳಗಿನ ಗಾದೆಗಳಲ್ಲಿ ಯಾವುದಾದರೂ ಒಂದನ್ನು ಗಾದೆಯ ಮಹತ್ತ್ವದೊಂದಿಗೆ ವಿಸ್ತರಿಸಿ ಬರೆಯಿರಿ.** **1*3=3**

20. ಮಾತು ಬೆಳ್ಳಿ; ಮೌನ ಬಂಗಾರ

ಅಥವಾ

ಕೈ ಕೆಸರಾದರೆ ಬಾಯಿ ಮೊಸರು

**VIII. ಕೆಳಗಿನ ವಾಕ್ಯ ಅಥವಾ ಹೇಳಿಕೆಗಳಿಗೆ ಸಂದರ್ಭ ಮತ್ತು ಸ್ವಾರಸ್ಯಗಳನ್ನು ಬರೆಯಿರಿ.** **2*2=04**

21. "ಇವತ್ತು ಮೇಷ್ಟ್ರಿಗೆ ಜ್ವರ ಬರಲಿ ದೇವರೇ"
22. "ನಮ್ಮಯ ದೇಶಕತಿಯ ನರೆದಲೆಗ"

**IX. ಕೆಳಗಿನ ಪದ್ಯಭಾಗವನ್ನು ಪೂರ್ಣಗೊಳಿಸಿ ಬರೆಯಿರಿ.** **1*1/2=2**

23. ನಾಡಿಗಾಗಿ ____________________
__________________________
_____ ____________________
__________________________ ಪಯಣದಲ್ಲಿ

**X. ಕೆಳಗಿನ ಪದ್ಯಭಾಗವನ್ನು ಓದಿ ಅರ್ಥಮಾಡಿಕೊಂಡು ಸಾರಾಂಶವನ್ನು ಬರೆಯಿರಿ.** **1*2=2**

24. ಮಾತಾ-ಪಿತರನು ಬಳಲಿಸುವಾತನು
ಮಾತ್ರೆಯ ಮಾಡುದರೇನು ಫಲ
ಘಾತಕತನವನು ಬಿಡದೆ ನಿರಂತರ
ಗೀತೆಯನೋದಿದರೇನು ಫಲ

**XI. ಕೆಳಗಿನ ಪ್ರಶ್ನೆಗಳಿಗೆ ಐದು ಅಥವಾ ಆರು ವಾಕ್ಯಗಳಲ್ಲಿ ಉತ್ತರ ಬರೆಯಿರಿ.** **2*3=6**

25. ಮುದ್ದಣನು ಪರಿಹಾಸ ಮಾಡಿದನೆಂದು ಮನೋರಮೆಯು ಹೇಳಲು ಕಾರಣವೇನು?

ಅಥವಾ

ಮುದ್ದಣನಿಗೆ ಒಲಿದ ಮಂತ್ರವನ್ನು ತಿಳಿದುಕೊಳ್ಳುವ ವಿಚಾರದಲ್ಲಿ ಗಂಡ-ಹೆಂಡಿತಿಯರ ನಡುವೆ ನಡೆದ ಸಂಭಾಷಣೆಯನ್ನು ನಿಮ್ಮ ಮಾತುಗಳಲ್ಲಿ ಬರೆಯಿರಿ.

26. ಗೆಳೆತನ ಇಹಲೋಕಕಿರುವ ಅಮೃತ ಹೇಗೆ? ತಿಳಿಸಿ.

ಅಥವಾ

ಗೆಳೆಯರ ಮನಸ್ಸಿನ ಭಾವನೆ ಹೇಗಿರುತ್ತದೆ? ವಿವರಿಸಿ.

**XII. ಕೆಳಗಿನ ಗದ್ಯಭಾಗವನ್ನು ಮನಸ್ಸಿನಲ್ಲಿ ಓದಿಕೊಂಡು, ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರ ಬರೆಯಿರಿ. 1*2=2[1+1]**

27. ವೇಳೆಯ ಅಪವ್ಯಯ ಅಂಬೇಡ್ಕರರಿಗೆ ಅಪರಾಧವಾಗಿ ಕಾಣುತ್ತಿತ್ತು. ಒಂದು ಕ್ಷಣವನ್ನೂ ಅವರು ಅಪವ್ಯಯ ಮಾಡುತ್ತಿರಲಿಲ್ಲ. ವ್ಯಾಪಾರಿಗೆ ವೇಳೆ ಎಂದರೆ ಹಣ. ಅಂಬೇಡ್ಕರ್ ಅವರಿಗೆ ವೇಳೆ ಎಂದರೆ ಜ್ಞಾನಾರ್ಜನೆ. ತಮ್ಮ ಬದುಕಿನ ಒಂದು ಕ್ಷಣವನ್ನೂ ವ್ಯರ್ಥವಾಗಿ ಕಳೆಯದ ನಮ್ಮ ಕಾಲದ ಇಬ್ಬರು ಮಹನೀಯರೆಂದರೆ ಒಬ್ಬರು ಗಾಂಧೀಜಿ ಮತ್ತೊಬ್ಬರು ಅಂಬೇಡ್ಕರರು. ಕಳೆದ ಕ್ಷಣ ಕಳದೇ ಹೋಗುತ್ತದೆಂಬ ಅರಿವು ಅವರದಾಗಿತ್ತು. ಅಮೆರಿಕಾದಲ್ಲಿ, ಇಂಗ್ಲೆಂಡಿನಲ್ಲಿ ಓದುತ್ತಿದ್ದಾಗ ಹೇಗೋ ಹಾಗೆ ಹಿಂತಿರುಗಿ ಸಾರ್ವಜನಿಕ ಜೀವನದಲ್ಲಿ ತೊಡಗಿದ ಮೇಲೆಯೂ ತಮ್ಮ ಬಿಡುವನ್ನೆಲ್ಲ ಅವರು ಓದುವುದಕ್ಕೆ ಮೀಸಲಾಗಿರಿಸುತ್ತಿದ್ದರು. ರಂಜನೆಗಾಗಿ ಓದುವವರು ಅವರಲ್ಲ; ಪುಸ್ತಕ ಒದಗಿಸಬಲ್ಲ ಬೋಧನೆಯೇ ರಂಜನೆ ಎನ್ನುವುದು ಅವರ ಸೂತ್ರವಾಗಿತ್ತು. ಹೀಗಾಗಿ ಗ್ರಂಥ ಸಹವಾಸ ಅವರಿಗೆ ಅಪಾರ ಸಂತೋಷವನ್ನಲ್ಲದೆ ಬಯಸುತ್ತಿದ್ದ ಏಕಾಂತವನ್ನೂ ಒದಗಿಸುತ್ತಿತ್ತು. ಅನೇಕ ಸಲ ರಾತ್ರಿಯುದ್ದಕ್ಕೂ ಅವರು ಓದುಬರೆಹಗಳಲ್ಲಿ ತೊಡಗಿರುತ್ತಿದ್ದುದ್ದುಂಟು. ಅವರ ನೆಚ್ಚಿನ ನಾಯಿ ಬೆಳಗಿನ ನೇವರಿಕೆಗಾಗಿ ಬಂದು ಕಾಲಬಳಿ ಸುಳಿದಾಗಲೆ ರಾತ್ರಿ ಕಳೆದುಹೋದ ಅರಿವು ಅವರಿಗಾದದ್ದುಂಟು. ರಾತ್ರಿ ಮನೆಗೆ ಹೋಗುತ್ತೇನೆಂದು ಹೇಳಿ ಹೊರಟುಹೋದ ಕಾರ್ಯದರ್ಶಿ ಬೆಳಗಿನಲ್ಲಿ ಮತ್ತೆ ಬಂದಾಗ ಮನೆಗೇಕೆ ಇನ್ನೂ ಹೋಗಲಿಲ್ಲ ಎಂದು ಕೇಳಿದ್ದುಂಟು. ಅಂಥ ಏಕಾಗ್ರತೆಯ ಓದುಬರೆಹ ಅವರದು. ಅವರ ಜ್ಞಾನದಾಹ ಪುರಾತನ ಕಾಲದ ಚಕ್ರವರ್ತಿಯೊಬ್ಬನ ಸಾಮ್ರಾಜ್ಯ ದಾಹದಂತಿತ್ತು. ದಟ್ಟಡವಿಯ ಮಧ್ಯದಲ್ಲಿ ಗ್ರಂಥಾಲಯ ಒಂದನ್ನು ನಿರ್ಮಿಸಿಕೊಂಡು, ತಮ್ಮ ಕೊನೆಯ ದಿನಗಳನ್ನು ಅಲ್ಲಿಯೇ ಕಳೆಯಬೇಕೆಂಬ ಅಭಿಲಾಷೆ ಅವರದಾಗಿತ್ತು.

**ಪ್ರಶ್ನೆಗಳು :**

27 (ಅ) ಅಂಬೇಡ್ಕರ್ ಅವರಿಗೆ ವೇಳೆ ಎಂದರೇನು?

27 (ಆ) ಅಂಬೇಡ್ಕರ್ ಅವರ ಜ್ಞಾನದಾಹ ಯಾವ ರೀತಿಯಲ್ಲಿತ್ತು?

**XIII. ಯಾವುದಾದರೂ ಒಂದಕ್ಕೆ ಕೊಟ್ಟಿರುವ ಮಾಹಿತಿಯನ್ನು ಆಧರಿಸಿ ಪತ್ರ ಬರೆಯಿರಿ. 1*4=4**

28. ನಿಮ್ಮನ್ನು ಮೈಸೂರಿನ ಕುವೆಂಪು ನಗರದ ಸರ್ಕಾರಿ ಪ್ರೌಢಶಾಲೆಯ 'ಕಮಲ' ಎಂದು ಭಾವಿಸಿಕೊಂಡು, ನಿಮ್ಮ ಅಣ್ಣನ ಮದುವೆಗೆ ಹೋಗಲು 5 ದಿನಗಳ ರಜೆಯನ್ನು ಕೋರಿ, ನಿಮ್ಮ ಮುಖ್ಯಶಿಕ್ಷಕರಿಗೆ ರಜಾಪತ್ರವನ್ನು ಬರೆಯಿರಿ.

ಅಥವಾ

**ಕೆಳಗಿನ ಯಾವುದಾದರೂ ಒಂದು ವಿಷಯದಲ್ಲಿ ಹದಿನೈದು ವಾಕ್ಯಗಳಿಗೆ ಕಡಿಮೆಯಿಲ್ಲದಂತೆ ಪ್ರಬಂಧ ಬರೆಯಿರಿ.**

ರಾಷ್ಟ್ರೀಯ ಹಬ್ಬಗಳು

# 8 ನೆಯ ತರಗತಿ ಎರಡನೆಯ ಸಂಕಲನಾತ್ಮಕ ಮೌಲ್ಯಾಂಕನ – 2024–25

## ವಿಷಯ : ಪ್ರಥಮ ಭಾಷೆ ಕನ್ನಡ – ಪ್ರಶ್ನೆ ಪತ್ರಿಕೆ

**ಒಟ್ಟು ಪ್ರಶ್ನೆಗಳ ಸಂಖ್ಯೆ : 28** **ವಿಷಯ ಸಂಕೇತ : 01K**
**ಸಮಯ : 1 – 45 ಗಂಟೆಗಳು** **ಗರಿಷ್ಠ ಅಂಕಗಳು : 50**

## ಮೌಲ್ಯಮಾಪನ ಸೂಚಿ (ಮಾದರಿ ಉತ್ತರ)

**I. ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಆಯ್ಕೆಗಳನ್ನು ಕೊಡಲಾಗಿದೆ. ಅವುಗಳಲ್ಲಿ ಹೆಚ್ಚು ಸೂಕ್ತವಾದ ಉತ್ತರವನ್ನು ಆರಿಸಿ, ಕ್ರಮಾಕ್ಷರದೊಂದಿಗೆ ಬರೆಯಿರಿ. 3*1=3**

**(ಕ್ರಮಾಕ್ಷರದೊಂದಿಗಿನ ಪ್ರತಿ ಸರಿಯುತ್ತರಕ್ಕೆ 1 ಅಂಕ)**

1. ಕನ್ನಡ ವರ್ಣಮಾಲೆಯಲ್ಲಿರುವ ಒಟ್ಟು ಅಕ್ಷರಗಳ ಸಂಖ್ಯೆ;
   ಎ) 34 ಬಿ) 49
   ಸಿ) 25 ಡಿ) 09
   **ಉತ್ತರ : ಬಿ) 49**
2. ಇವುಗಳಲ್ಲಿ ಆದೇಶ ಸಂಧಿಗೆ ಉದಾಹರಣೆಯಾದ ಪದವಿದು;
   ಎ) ಹುಲ್ಲುಗಾವಲು ಬಿ) ಪುಸ್ತಕವನ್ನು
   ಸಿ) ನಿಲ್ಮನೆಯನ್ನು ಡಿ) ಬಾನಿನೆಡೆ
   **ಉತ್ತರ : ಎ) ಹುಲ್ಲುಗಾವಲು**
3. 'ಬೆಟ್ಟದಾವರೆ' ಪದವು ಈ ಸಮಾಸಕ್ಕೆ ಉದಾಹರಣೆಯಾಗಿದೆ;
   ಎ) ಕರ್ಮಧಾರಯ ಬಿ) ದ್ವಿಗು
   ಸಿ) ತತ್ಪುರುಷ ಡಿ) ದ್ವಂದ್ವ
   **ಉತ್ತರ : ಸಿ) ತತ್ಪುರುಷ**

**II. ಕೆಳಗಿನ ಪ್ರಶ್ನೆಗಳಿಗೆ ಮೊದಲೆರಡು ಪದಗಳಿಗಿರುವ ಸಂಬಂಧದಂತೆ ಮೂರನೆಯ ಪದಕ್ಕೆ ಸರಿಹೊಂದುವ ಸಂಬಂಧೀ ಪದವನ್ನು ಬರೆಯಿರಿ. 2*1=2**

**(ಪ್ರತಿ ಸರಿಯುತ್ತರಕ್ಕೆ 1 ಅಂಕ)**

4. ಗಣೇಶ : ಅಂಕಿತನಾಮ : : ಪಂಡಿತ : **ಅನ್ವರ್ಥನಾಮ**
5. ವರ್ಷ : ವರುಸ : : ಪುಣ್ಯ : **ಹೂನ್ಯ**

**III. ಕೆಳಗಿನ ಪ್ರಶ್ನೆಗಳಿಗೆ ಪ್ರತಿಯೊಂದಕ್ಕೂ ಒಂದೊಂದು ವಾಕ್ಯದಲ್ಲಿ ಉತ್ತರ ಬರೆಯಿರಿ. 7*1=7**

**(ಪ್ರತಿ ಸರಿಯುತ್ತರಕ್ಕೆ ಒಂದು ಅಂಕ)**

6. **ರಹೀಮನು ಮಗ್ಗವನ್ನು ಮುಟ್ಟದೆ ಎಷ್ಟು ವರ್ಷಗಳಾಗಿತ್ತು?**
   ಬಾಗಲೋಡಿಯ ಅಬ್ದುಲ್ ರಹೀಮ್ ಸಾಹೇಬನು ಮಗ್ಗವನ್ನು ಮುಟ್ಟದೆ **ಇಪ್ಪತ್ತು** ವರ್ಷಗಳಾಗಿತ್ತು.
7. **ಡಿವಿಜಿ ಅವರ ಮನಸ್ಸಿನ ಮೇಲೆ ಪ್ರಭಾವವನ್ನು ಬೀರಿದವರು ಯಾರು?**
   ಡಿವಿಜಿ ಅವರ ಮನಸ್ಸಿನ ಮೇಲೆ ಪ್ರಭಾವ ಬೀರಿದವರು **ಅವರ ಅಜ್ಜಿ ಎಂದರೆ ತಾಯಿಯ ತಾಯಿ ಸಾಕಮ್ಮ ಹಾಗೂ ಸೋದರ ಮಾವ ತಿಮ್ಮಪ್ಪ.**
8. **ವಿದೇಶಗಳಲ್ಲಿ ನೀರಿಗಿಂತ ಅಗ್ಗವಾಗಿ ಸಿಗುವುದೇನು?**
   ವಿದೇಶಗಳಲ್ಲಿ ನೀರಿಗಿಂತ ಕೋಲಾ ಅಗ್ಗವಾಗಿ ಸಿಗುತ್ತದೆ.
9. **ಕನ್ನಡ ತಾಯಿಯ ಬಸಿರ ಹೊನ್ನಗನಿ ಯಾರು?**
   ಕನ್ನಡ ತಾಯಿಯ ಬಸಿರ ಹೊನ್ನಗನಿ **ವಿದ್ಯಾರಣ್ಯರು.**
10. **ಆಲದ ಮರದ ಬೀಜ ಸಿಡಿದು ಭೂಮಿಗೆ ಬಿದ್ದು ಏನಾಗುತ್ತದೆ?**
    ಆಲದ ಮರದ ಬೀಜ ಸಿಡಿದು ಭೂಮಿಗೆ ಬಿದ್ದು ದೊಡ್ಡ ಮರವಾಗಿ ಬೆಳೆಯುತ್ತದೆ.

**11.** **ನಮ್ಮೆದೆಯ ಕಾಮಧೇನು ಯಾವುದು?**

ನಮ್ಮ ಕನಸುಗಳೇ ನಮ್ಮೆದೆಯ ಕಾಮಧೇನು.

**12.** **ಮುದುಕಿಯನ್ನು ಭೇಟಿಯಾದ ವ್ಯಕ್ತಿ ಯಾರು?**

ಮುದುಕಿಯನ್ನು ದಾರಿಯಲ್ಲಿ ಭೇಟಿಯಾದ ವ್ಯಕ್ತಿ ಯಾರೆಂದರೆ ಹಳ್ಳಿಯಲ್ಲಿ ಮಳೆಯಿಲ್ಲದೆ ಪಟ್ಟಣಕ್ಕೆ ಹೋಗಿ ದುಡಿಯೋಣ ಎಂದು ಹೊರಟ ಬಡವನಾದ ತಿಮ್ಮರಾಯ.

## IV. ಕೆಳಗಿನ ಪ್ರಶ್ನೆಗಳಿಗೆ ಮೂರು ನಾಲ್ಕು ವಾಕ್ಯಗಳಲ್ಲಿ ಉತ್ತರ ಬರೆಯಿರಿ. 5*2=10

**(ಉತ್ತರದ ಅಂಶಗಳನ್ನಾಧರಿಸಿ ಪ್ರತಿ ಪ್ರಶ್ನೆಗೂ ಎರಡು ಅಂಕಗಳು)**

**13.** **ಅರಮನೆಗೆ ಹೂವು ಎಲ್ಲಿಂದ ಬರುತ್ತದೆ ಎಂದು ದೊರೆಮಗನು ಹೇಗೆ ಕಂಡು ಹಿಡಿದನು?**

ದೊರೆಮಗನಿಗೆ "ತಮ್ಮ ಅರಮನೆಗೆ ಇಷ್ಟು ಸೊಗಸಾದ ಹೂವು ಎಲ್ಲಿಂದ ಬರುತ್ತದೆ" ಎನ್ನುವುದನ್ನು ತಿಳಿಯುವ ಕುತೂಹಲ ಉಂಟಾಯಿತು. ಅದಕ್ಕಾಗಿ ಆತನು ತಮ್ಮ ಅರಮನೆಗೆ ಹೂವು ತಂದು ಕೊಡುವ ದೊಡ್ಡ ಹುಡುಗಿಯನ್ನು ಹಿಂಬಾಲಿಸಿದನು. ಮನೆಯ ಸುತ್ತ ಹೂವಿನ ಗಿಡಗಳು ಇಲ್ಲದ್ದನ್ನು ಗಮನಿಸಿ, ಅರಮನೆಗೆ ಹಿಂದಿರುಗಿದನು. ಮಾರನೆಯ ದಿನ ಸೂರ್ಯನು ಹುಟ್ಟುವ ಮೊದಲೇ ಹೂವು ತರುತ್ತಿದ್ದ ಹುಡುಗಿಯ ಮನೆಯ ಮುಂದೆ ಇದ್ದ ದೊಡ್ಡ ಮರದ ಮೇಲೆ ಅವಿತು, ಕುಳಿತುಕೊಂಡನು. ಅಲ್ಲಿ ಹೂವನ್ನು ಅರಮನೆಗೆ ತರುತ್ತಿದ್ದ ಹುಡುಗಿಯ ತಂಗಿಯು ಹೂವಾಗುವುದನ್ನು ಕಂಡನು. ಹೀಗೆ ದೊರೆಮಗನು "ಅರಮನೆಗೆ ಹೂವು ಎಲ್ಲಿಂದ ಬರುತ್ತದೆ" ಎನ್ನುವುದನ್ನು ಕಂಡುಹಿಡಿದನು.

**14.** **ಚಾವುಂಡರಾಯ ಯಾರು? ಆತನ ವಿಶೇಷತೆಯೇನು?**

ಚಾವುಂಡರಾಯನು ತಲಕಾಡಿನ ಗಂಗ ವಂಶದ ದೊರೆಗಳಾದ ಮಾರಸಿಂಹ, ರಾಚಮಲ್ಲ, ರಕ್ಕಸಗಂಗರ ಮಂತ್ರಿಯಾಗಿದ್ದನು. ಜನರು ಚಾವುಂಡರಾಯನನ್ನು 'ರಾಯ', 'ಅಣ್ಣ' ಎಂದು ಕರೆಯುತ್ತಿದ್ದರು. ಸ್ವತಃ ಕವಿಯಾದ ಚಾವುಂಡರಾಯನು ಕನ್ನಡಕ್ಕೆ ಕೊಟ್ಟ ಕಾಣ್ಕೆ ಎಂದರೆ 'ಚಾವುಂಡರಾಯ ಪುರಾಣ' ಎಂಬ ಹೆಸರಿನ ಅರವತ್ತಮೂರು ಪುಣ್ಯಪುರುಷರ ಚರಿತ್ರೆ.

**15.** **ಕೋಗಿಲೆಯ ಗಾನಕ್ಕೆ ಪ್ರಕೃತಿಯು ಹೇಗೆ ಸ್ಪಂದಿಸಿತು?**

ಕೋಗಿಲೆಯ "ಕುಹೂ! ಕುಹೂ!" ಧ್ವನಿಯನ್ನು ಕೇಳಿ ಜಗವು ಜುಂ ಎಂದಿತು. ಕೋಗಿಲೆಯ ಧ್ವನಿಯನ್ನು ಕೇಳಿ ನೀರವ ಪರ್ವತ ಕಾನನ ಶ್ರೇಣಿಯು ಮುದವನ್ನು ತಾಳಿ ಮರುದನಿ ಮಾಡಿತು. ಕೋಗಿಲೆಯ ಗಾನವನ್ನು ಕೇಳಿ ಗಗನವು ಸುಮ್ಮನೆ ಮಾತನಾಡದೆ ಬಣ್ಣಿಸುತ್ತಿತ್ತು. ಕಣಿವೆಯಲ್ಲಿದ್ದ ಸರೋವರ ಕೋಗಿಲೆಯ ಗಾನಕ್ಕೆ ತೆರೆಗಳ ಮೂಲಕ ಚಪ್ಪಾಳೆಯನ್ನು ತಟ್ಟಿತು. ಕೋಗಿಲೆಯು ತನ್ನ ಮಧುರವಾದ ಧ್ವನಿಗೆ ತನ್ನನ್ನು ತಾನೇ ಮರೆಯುತ 'ಕುಹೂ! ಕುಹೂ!' ಎಂದು ಹಾಡಿತು. ಹೀಗೆ ಕೋಗಿಲೆಯ ಗಾನಕ್ಕೆ ಪ್ರಕೃತಿಯು ಸ್ಪಂದಿಸಿತು.

**16.** **ಆಯ್ದಕ್ಕಿ ಮಾರಯ್ಯನು ಕಾಯಕದ ಮಹತ್ತ್ವವನ್ನು ಹೇಗೆ ನಿರೂಪಿಸಿದ್ದಾನೆ?**

"ಕಾಯಕದಲ್ಲಿ ನಿರತವಾದಾಗ ಗುರುದರ್ಶನವಾದರೂ ಮರೆಯಬೇಕು. ಲಿಂಗಪೂಜೆಯನ್ನು ಮಾಡುವುದನ್ನು ಮರೆಯಬೇಕು. ಜಂಗಮರು ಮುಂದೆ ಬಂದರೂ ಅವರ ಹಂಗನ್ನು ಹರಿಯಬೇಕು. ಕಾಯಕವೇ ಕೈಲಾಸವಾದ ಕಾರಣ ಅಮರೇಶ್ವರ ಲಿಂಗವನ್ನು ಇತ್ತಾದರೂ ಕಾಯಕದಲ್ಲಿ ತಲ್ಲೀನರಾಗಬೇಕು" ಎಂಬುದಾಗಿ ಆಯ್ದಕ್ಕಿ ಮಾರಯ್ಯ ಅವರು ಕಾಯಕದ ಮಹತ್ತ್ವವನ್ನು ನಿರೂಪಿಸಿದ್ದಾರೆ.

**17.** **ಲೇಖಕರಾದ ಶ್ರೀ ಎಚ್. ನರಸಿಂಹಯ್ಯ ಅವರಿಗೆ ವಿಮಾನಯಾನದ ಬಗ್ಗೆ ಭಯವಿಲ್ಲವೇಕೆ?**

ಲೇಖಕರಾದ ಶ್ರೀ ಎಚ್. ನರಸಿಂಹಯ್ಯ ಅವರಿಗೆ ವಿಮಾನದ ಯಾನದ ಬಗ್ಗೆ ಭಯವಿಲ್ಲ. ಏಕೆಂದರೆ ವಿಮಾನಕ್ಕೆ ಯಾವಾಗಲೂ ಎಮ್ಮೆ, ಹಸು, ಜನ ಅಡ್ಡ ಬರುವುದಿಲ್ಲ; ಜೊತೆಗೆ ವಿಮಾನವನ್ನು ಯಾರೂ ಓವರ್ ಟೇಕ್ ಮಾಡುವ ಪ್ರಸಂಗವೂ ಇಲ್ಲ.

## V. ಕೆಳಗಿನ ಕವಿ/ಸಾಹಿತಿಗಳ ಸ್ಥಳ, ಕಾಲ, ಕೃತಿ ಮತ್ತು ಪ್ರಶಸ್ತಿಗಳನ್ನು ಕುರಿತು ವಾಕ್ಯರೂಪದಲ್ಲಿ ಬರೆಯಿರಿ. 1*2=2

| | |
|---|---|
| ಸ್ಥಳ, ಕಾಲ | 1 ಅಂಕ |
| ಕೃತಿ, ಪ್ರಶಸ್ತಿ | 1 ಅಂಕ |
| ಒಟ್ಟು | 2 ಅಂಕಗಳು |

**18.** **ಮಾಸ್ತಿ ವೆಂಕಟೇಶ ಅಯ್ಯಂಗಾರ್**

**'ಕನ್ನಡದ ಆಸ್ತಿ ಮಾಸ್ತಿ'** ಎಂದು ಪ್ರಸಿದ್ಧರಾದ ಶ್ರೀ **ಮಾಸ್ತಿ ವೆಂಕಟೇಶ ಅಯ್ಯಂಗಾರ್** ಅವರು ಕ್ರಿ. ಶ. **1891** ರಲ್ಲಿ ಕೋಲಾರ ಜಿಲ್ಲೆಯ ಮಾಲೂರು ತಾಲೂಕಿನ **ಮಾಸ್ತಿ** ಎಂಬ ಗ್ರಾಮದಲ್ಲಿ ಜನಿಸಿದರು. **'ಸಣ್ಣಕಥೆಗಳ ಜನಕ'** ಎಂದು ಪ್ರಖ್ಯಾತರಾದ ಇವರು **ಯಶೋಧರೆ,** ಚಿಕವೀರ ರಾಜೇಂದ್ರ, ಗೌತಮಿ ಹೇಳಿದ ಕಥೆ, ಸಾರಿಪುತ್ರನ ಕೊನೆಯ ದಿನಗಳು, ಕುಚೇಲನ ಭಾಗ್ಯ, ಹೇಮಕೂಟದಿಂದ ಬಂದ ಮೇಲೆ ಎನ್ನುವ ಮೊದಲಾದ ಕೃತಿಗಳನ್ನು ರಚಿಸಿದ್ದಾರೆ. ಇವರಿಗೆ **'ಭಾರತೀಯ ಜ್ಞಾನಪೀಠ ಪ್ರಶಸ್ತಿ',** ಕರ್ನಾಟಕ ಸರ್ಕಾರದ **'ಪಂಪ ಪ್ರಶಸ್ತಿ',** ಕೇಂದ್ರ ಮತ್ತು ರಾಜ್ಯ ಸಾಹಿತ್ಯ ಅಕಾಡೆಮಿ ಪ್ರಶಸ್ತಿಗಳು ಲಭಿಸಿವೆ.

**VI.** **ಕೆಳಗಿನ ಪದ್ಯ ಭಾಗಕ್ಕೆ ಪ್ರಸ್ತಾರ ಹಾಕಿ, ಗಣ ವಿಭಾಗಿಸಿ, ಛಂದಸ್ಸಿನ ಹೆಸರನ್ನು ಬರೆಯಿರಿ.** **1*3=3**

| | |
|---|---|
| **ಪ್ರಸ್ತಾರ ಹಾಕುವುದು** | **1 ಅಂಕ** |
| **ಗಣ ವಿಭಾಗಿಸುವುದು** | **1 ಅಂಕ** |
| **ಛಂದಸ್ಸಿನ ಹೆಸರು ಬರೆಯುವುದು** | **1 ಅಂಕ** |
| **ಒಟ್ಟು** | **3 ಅಂಕಗಳು** |

**19.** **ಕೆಲರು ಗೋದಿಯ ಸಾಮೆಯನು ಕೆಲ**
**ಕೆಲರು ನವಣೆಯ ಕಂಬು ಜೋಳವ**
**ಕೆಲರು ಹಾರಕವೆಂದು ಕೆಲವರು ನೆಲ್ಲನತಿಶಯವ ।**

| | | | |
|---|---|---|---|
| 3 | 4 | 3 | 4 |
| UUU | — U U | — U | U U UU |
| ಕೆಲರು | ಗೋದಿಯ | ಸಾಮೆ | ಯನು ಕೆಲ |

| | | | |
|---|---|---|---|
| 3 | 4 | 3 | 4 |
| UUU | UU UU | — U | — UU |
| ಕೆಲರು | ನವಣೆಯ | ಕಂಬು | ಜೋಳವ |

| | | | | | | |
|---|---|---|---|---|---|---|
| 3 | 4 | 3 | 4 | 3 | 4 | ಗುರು |
| UU U | — UU | — U | UU UU | — U | UU UU | — |
| ಕೆಲರು | ಹಾರಕ | ವೆಂದು | ಕೆಲವರು | ನೆಲ್ಲ | ನತಿಶಯ | ವ |

ಈ ಮೇಲಿನ ಪದ್ಯವು ಮಾತ್ರಾ ಗಣದ **'ಭಾಮಿನಿ ಷಟ್ಪದಿ'**ಯಲ್ಲಿ ರಚಿತವಾಗಿದೆ.

**ಅಥವಾ**

**ಕೆಳಗಿನ ವಾಕ್ಯದಲ್ಲಿರುವ ಅಲಂಕಾರವನ್ನು ಹೆಸರಿಸಿ, ಲಕ್ಷಣ ಬರೆದು, ಸಮನ್ವಯಗೊಳಿಸಿರಿ.**

| | |
|---|---|
| **ಅಲಂಕಾರವನ್ನು ಹೆಸರಿಸುವುದು** | **1 ಅಂಕ** |
| **ಲಕ್ಷಣ ಬರೆಯುವುದು** | **1 ಅಂಕ** |
| **ಸಮನ್ವಯ ಮಾಡುವುದು** | **1 ಅಂಕ** |
| **ಒಟ್ಟು** | **3 ಅಂಕಗಳು** |

**ಸೀತೆಯ ಮುಖ ಕಮಲದಂತೆ ಅರಳಿತು.**

**ಅಲಂಕಾರ** : ಉಪಮಾ ಅಲಂಕಾರ

**ಲಕ್ಷಣ** : ಎರಡು ವಸ್ತುಗಳಿಗಿರುವ ಸಾದೃಶ್ಯ, ಸಂಪತ್ತನ್ನು ಪರಸ್ಪರ ಹೋಲಿಸಿ ವರ್ಣಿಸಿದರೆ ಅದನ್ನು ಉಪಮಾಲಂಕಾರವೆನ್ನುವರು.

**ಉಪಮೇಯ** : ಮನೋರಮೆಯ ಮುಖ
**ಉಪಮಾನ** : ಕಮಲ
**ಉಪಮಾವಾಚಕ** : ಅಂತೆ
**ಸಮಾನಧರ್ಮ** : ಅರಳುವುದು
**ಸಮನ್ವಯ** : ಇಲ್ಲಿ ಉಪಮೇಯವಾದ ಮನೋರಮೆಯ ಮುಖವನ್ನು ಉಪಮಾನವಾದ ಕಮಲಕ್ಕೆ ಪರಸ್ಪರ ಹೋಲಿಸಿ ವರ್ಣಿಸಲಾಗಿದೆ. ಆದ್ದರಿಂದ ಈ ವಾಕ್ಯವು ಉಪಮಾಲಂಕಾರಕ್ಕೆ ಉದಾಹರಣೆಯಾಗಿದೆ.

**VII. ಕೆಳಗಿನ ಗಾದೆಗಳಲ್ಲಿ ಯಾವುದಾದರೂ ಒಂದನ್ನು ಗಾದೆಯ ಮಹತ್ತ್ವದೊಂದಿಗೆ ವಿಸ್ತರಿಸಿ ಬರೆಯಿರಿ.** **1*3=3**

| | |
|---|---|
| **ಗಾದೆಯ ಮಹತ್ತ್ವದ ವಿವರಣೆ** | **1 ಅಂಕ** |
| **ಉದಾಹರಣೆಯೊಂದಿಗೆ ಅರ್ಥ ವಿವರಣೆ** | **1 ಅಂಕ** |
| **ಭಾಷಾ ಶೈಲಿ – ಪದಬಂಧ** | **1 ಅಂಕ** |
| **ಒಟ್ಟು** | **3 ಅಂಕಗಳು** |

**20. ಮಾತು ಬೆಳ್ಳಿ; ಮೌನ ಬಂಗಾರ**

ಗಾದೆಗಳು ವೇದಗಳಿಗೆ ಸಮಾನ ಎನ್ನುತ್ತಾರೆ. ಗಾದೆ ವೇದಕ್ಕಿಂತ ಒಂದುಪಟ್ಟು ಮಿಗಿಲಾಗಿರುವುದರಿಂದ **'ವೇದ ಸುಳ್ಳಾದರೂ ಗಾದೆ ಸುಳ್ಳಾಗದು'** ಎಂಬುವ ನುಡಿ ಹುಟ್ಟಿತು. ಹಿರಿಯರ ಅನುಭವದ ನುಡಿಮುತ್ತುಗಳೇ ಈ ಗಾದೆಗಳು. ಬಿಂದುವಿನಂತಹ ಗಾದೆಯಲ್ಲಿ ಸಿಂಧುವಿನಂತಹ ವಿಶಾಲಾರ್ಥವು ಅಡಗಿರುತ್ತದೆ. ಅಂತಹ ಮಹತ್ತ್ವದ ಗಾದೆಗಳಲ್ಲಿ **'ಮಾತು ಬೆಳ್ಳಿ; ಮೌನ ಬಂಗಾರ'** ಎಂಬ ಗಾದೆಯೂ ಸಹ ಒಂದಾಗಿದೆ.

**'ಮಾತು ಬೆಳ್ಳಿ; ಮೌನ ಬಂಗಾರ'** ಎನ್ನುವುದು ಮೌನದ ಮಹತ್ತ್ವವನ್ನು ತಿಳಿಸುವ ಒಂದು ಸುಂದರ ಗಾದೆಯಾಗಿದೆ. ಬೆಳ್ಳಿಗಿಂತ ಬಂಗಾರ ಹೆಚ್ಚು ಬೆಲೆಯುಳ್ಳದ್ದಾಗಿದೆ. ಅದೇ ರೀತಿ 'ಮಾತಿಗಿಂತ ಮೌನಕ್ಕೆ ಹೆಚ್ಚು ಮೌಲ್ಯವಿದೆ' ಎಂಬುದು ಈ ಗಾದೆ ಮಾತಿನ ಅರ್ಥವಾಗಿದೆ. ಕೆಲವೊಮ್ಮ ನಾವು ಆಡುವ ಮಾತು ಅನರ್ಥಕಾರಿಯಾಗಬಹುದು. ಅಂತಹ ಸಂದರ್ಭದಲ್ಲಿ ಮಾತನಾಡದೆ ಮೌನವಾಗಿದ್ದರೆ ನಮಗೆ ಗೌರವ ದೊರೆಯುತ್ತದೆ. 'ಮಾತು ಆಡಿದರೆ ಹೋಯಿತು; ಮುತ್ತು ಒಡೆದರೆ ಹೋಯಿತು' ಎಂಬ ಗಾದೆಯು ಸಹ ಈ ಮಾತನ್ನು ಸಮರ್ಥಿಸುತ್ತದೆ. ನಾವು ಯಾವಾಗ ಎಷ್ಟು ಮಾತನಾಡಬೇಕು ಎಂಬುದನ್ನು ತಿಳಿದಿರಬೇಕು. ಅನಗತ್ಯವಾದ ಅರ್ಥವಿಲ್ಲದ ಮಾತನಾಡಿ, ಗೌರವವನ್ನು ಕಳೆದುಕೊಳ್ಳುವುದರ ಬದಲು ಮಾತಾನಾಡದೆ ಮೌನವಾಗಿರುವುದು ಹೆಚ್ಚು ಒಳ್ಳೆಯದು. ನಾವು ಮಾತನಾಡುವಾಗ ಯೋಚಿಸಿ ಮಾತನಾಡಬೇಕು; "ಇನ್ನೊಬ್ಬರ ಮನಸ್ಸಿಗೆ ನೋವಾಗುವಂತೆ ಮಾತನಾಡುವುದಕ್ಕಿಂತ ಮೌನವಾಗಿರುವುದೇ ಲೇಸು" ಎಂದು ಗಾದೆಯು ನಮಗೆ ತಿಳಿಸುತ್ತದೆ.

**ಅಥವಾ**

**ಕೈ ಕೆಸರಾದರೆ ಬಾಯಿ ಮೊಸರು**

ಗಾದೆಗಳು ವೇದಗಳಿಗೆ ಸಮಾನ ಎನ್ನುತ್ತಾರೆ. ಗಾದೆ ವೇದಕ್ಕಿಂತ ಒಂದುಪಟ್ಟು ಮಿಗಿಲಾಗಿರುವುದರಿಂದ **'ವೇದ ಸುಳ್ಳಾದರೂ ಗಾದೆ ಸುಳ್ಳಾಗದು'** ಎಂಬುವ ನುಡಿ ಹುಟ್ಟಿತು. ಹಿರಿಯರ ಅನುಭವದ ನುಡಿಮುತ್ತುಗಳೇ ಈ ಗಾದೆಗಳು. ಬಿಂದುವಿನಂತಹ ಗಾದೆಯಲ್ಲಿ ಸಿಂಧುವಿನಂತಹ ವಿಶಾಲಾರ್ಥವು ಅಡಗಿರುತ್ತದೆ. ಅಂತಹ ಮಹತ್ತ್ವದ ಗಾದೆಗಳಲ್ಲಿ **'ಕೈ ಕೆಸರಾದರೆ ಬಾಯಿ ಮೊಸರು'** ಎಂಬ ಗಾದೆಯೂ ಸಹ ಒಂದಾಗಿದೆ.
ಪ್ರಸ್ತುತ ಗಾದೆ 'ಕೈ ಕೆಸರಾದರೆ ಬಾಯಿ ಮೊಸರು' ಈ ದಿನಗಳಲ್ಲಿ ಎಚ್ಚರಿಕೆಯ ಗಂಟೆಯಾಗಿದೆ. ಕೈ ಕೆಸರು ಅಥವಾ ಕೊಳೆಯಾಗುವುದು ಶ್ರಮದ ದುಡಿಮೆಯನ್ನು ಸಂಕೇತಿಸಿದರೆ ಮೊಸರು ಅದರ ಪ್ರತಿಫಲವನ್ನು ಬಿಂಬಿಸುತ್ತದೆ. ಪ್ರಕೃತಿಯಲ್ಲಿ ದೇಹದಂಡಿಸದೆ ಬದುಕಲು ಹೊರಟರೆ ಅಂತಹ ದೇಹ ಶಿಥಿಲಗೊಳ್ಳುತ್ತದೆ ಯಾವ ರೂಪದಲ್ಲಾದರು ಶ್ರಮ ಪಡಲೇಬೇಕು. **'ಕಷ್ಟಪಟ್ಟರೆ ಫಲವುಂಟು'** ಎಂಬುದನ್ನು ಈ ಗಾದೆಯು ಸಮರ್ಥಿಸುತ್ತದೆ. ಸೋಮಾರಿಯಾದವನು ದುಡಿಯದಿದ್ದರೆ ಇತರರ ಹಂಗಿನಲ್ಲಿ ಬದುಕಬೇಕಾಗುತ್ತದೆ. ನಾವೇ ಸ್ವತಃ ದುಡಿದು ತಿನ್ನುವುದು ಸ್ವಾಭಿಮಾನಿಗಳ ಲಕ್ಷಣ. "ಅಪ್ಪನ ಆಸ್ತಿ ಇದೆ ಎಂದು ದುಡಿಯದೆ ಕುಳಿತು ತಿಂದರೆ ಮುಂದೊಂದು ದಿನ ಕೈ ಖಾಲಿಯಾಗಬಹುದು. ಹಾಗಾಗಿ ಎಲ್ಲರೂ ತಮ್ಮ ಸಾಮರ್ಥ್ಯಕ್ಕೆ ಅನುಗುಣವಾಗಿ ಯಾವುದಾದರೊಂದು

ಉದ್ಯೋಗ ಮಾಡಿ ತಮ್ಮ ಕಾಲ ಮೇಲೆ ತಾವು ನಿಂತು ಸ್ವಾವಲಂಬಿಗಳಾಗಬೇಕು" ಎಂಬುದನ್ನು ಈ ಗಾದೆಯು ತಿಳಿಸುತ್ತದೆ.

**VIII. ಕೆಳಗಿನ ವಾಕ್ಯ ಅಥವಾ ಹೇಳಿಕೆಗಳಿಗೆ ಸಂದರ್ಭ ಮತ್ತು ಸ್ವಾರಸ್ಯಗಳನ್ನು ಬರೆಯಿರಿ. 2*2=4**

| | |
|---|---|
| ಆಯ್ಕೆ : ಕರ್ತೃ – ಆಕರ – ಪಠ್ಯ | 1 ಅಂಕ |
| ಸಂದರ್ಭ : ಯಾರು – ಯಾರಿಗೆ – ಯಾವಾಗ | 1 ಅಂಕ |
| ಒಟ್ಟು | 2 ಅಂಕಗಳು |

**21.** **"ಇವತ್ತು ಮೇಷ್ಟ್ರಿಗೆ ಜ್ವರ ಬರಲಿ ದೇವರೇ"**
**ಆಯ್ಕೆ :** ಈ ವಾಕ್ಯವನ್ನು **ಶ್ರೀ ಯು. ಆರ್. ಅನಂತಮೂರ್ತಿ** ಅವರು ರಚಿಸಿರುವ **'ಸುರಗಿ'** ಆತ್ಮಕಥೆಯಿಂದ ಆಯ್ದ **'ಅಮ್ಮ'** ಎಂಬ ಗದ್ಯಪಾಠದಿಂದ ಆರಿಸಲಾಗಿದೆ.
**ಸಂದರ್ಭ :** ಲೇಖಕರು ತನ್ನ ಬಾಲ್ಯದ ದಿನಗಳನ್ನು ನೆನೆಪು ಮಾಡಿಕೊಳ್ಳುತ್ತ "ಕೃಷ್ಣಪ್ಪಯ್ಯ ಮೇಷ್ಟ್ರಿಗಾಗಿ ಆತಂಕಪಡುತ್ತಾ ಕಾಯುತ್ತಿದ್ದೆನು" ಎಂದು ಹೇಳುವ ಸಂದರ್ಭದಲ್ಲಿ ಈ ಮಾತನ್ನು ಹೇಳುತ್ತಾರೆ.

**22.** **"ನಮ್ಮಯ ದೇಶಕತಿಯ ನರೆದಲೆಗ"**
**ಆಯ್ಕೆ :** ಈ ಮಾತನ್ನು **ಶ್ರೀಕನಕದಾಸರು** ರಚಿಸಿರುವ **'ರಾಮಧಾನ್ಯ ಚರಿತೆ'** ಎಂಬ ಕೃತಿಯಿಂದ ಆಯ್ದ **'ರಾಮಧಾನ್ಯ ಚರಿತೆ'** ಎಂಬ ಪದ್ಯಭಾಗದಿಂದ ಆರಿಸಲಾಗಿದೆ.
**ಸಂದರ್ಭ :** ಶ್ರೀರಾಮನು ಗೌತಮ ಮುನಿಯ ಆಶ್ರಮದಲ್ಲಿ ವಿವಿಧ ಭಕ್ಷ್ಯಭೋಜ್ಯಗಳಿಂದ ಕೂಡಿದ ಆತಿಥ್ಯವನ್ನು ಸ್ವೀಕರಿಸಿ ತಾನು ಸವಿದ ಧಾನ್ಯಗಳ ಮಹತ್ತ್ವವನ್ನು ತಿಳಿಸಬೇಕೆಂದು ಗೌತಮ ಮುನಿಯನ್ನು ಕೇಳಿಕೊಂಡ ಸಂದರ್ಭದಲ್ಲಿ ಗೌತಮ ಮುನಿಗಳು ಈ ಮಾತನ್ನು ಹೇಳುತ್ತಾರೆ.

**IX. ಕೆಳಗಿನ ಪದ್ಯಭಾಗವನ್ನು ಪೂರ್ಣಗೊಳಿಸಿ ಬರೆಯಿರಿ. 1*1/2=2**
**(ತಪ್ಪಿಲ್ಲದೆ ಬರೆದ ಪ್ರತಿ ಪೂರ್ಣ ಸಾಲಿಗೆ 1/2 ಅಂಕ)**

23. **ನಾಡಿಗಾಗಿ** ತನುವ ತೆತ್ತ ಹುತಾತ್ಮರ ಸ್ಮರಣೆಯಲ್ಲಿ
ನಮ್ಮ ಕಷ್ಟದಲ್ಲು ನೆರೆಗೆ ನೆರಳನೀವ ಕರುಣೆಯಲ್ಲಿ
ದಾರಿ ಬಳಸಿ ಏರುವಲ್ಲಿ ಬಿರುಗಾಳಿಯೆ ಮೊಳಗುವಲ್ಲಿ
ನಮ್ಮ ಗುರಿಯ ಬೆಳಕಿನೆಡೆಗೆ ನಡೆವ ಧೀರ **ಪಯಣದಲ್ಲಿ**

**X. ಕೆಳಗಿನ ಪದ್ಯಭಾಗವನ್ನು ಓದಿ ಅರ್ಥಮಾಡಿಕೊಂಡು, ಅಡಕವಾಗಿರುವ ಮೌಲ್ಯವನ್ನಾಧರಿಸಿ ಸಾರಾಂಶವನ್ನು ಬರೆಯಿರಿ. 1*2=2**

| | |
|---|---|
| ಸಾರಾಂಶ ಬರೆಯುವುದಕ್ಕೆ, ಭಾಷಾ ಶೈಲಿ | 2. ಅಂಕಗಳು |
| ಒಟ್ಟು | 2. ಅಂಕಗಳು |

**24.** **ಮಾತಾ–ಪಿತರನು ಬಳಲಿಸುವಾತನು**
**ಯಾತ್ರೆಯ ಮಾಡುದರೇನು ಫಲ**
**ಘಾತಕತನವನು ಬಿಡದೆ ನಿರಂತರ**
**ಗೀತೆಯನೋದಿದರೇನು ಫಲ**
ಈ ಪದ್ಯಭಾಗವನ್ನು ಪುರಂದರದಾಸ ಅವರು ರಚಿಸಿರುವ ಕೀರ್ತನೆಗಳಲ್ಲಿ ಒಂದಾದ 'ಬೇವುಬೆಲ್ಲದೊಳಿಡಲೇನು ಫಲ' ಎಂಬ ಪದ್ಯಭಾಗದಿಂದ ಆರಿಸಿಕೊಳ್ಳಲಾಗಿದೆ.
ಮಕ್ಕಳು ತಂದೆತಾಯಿಗಳನ್ನು ನೋಯಿಸದೆ ನಿಸ್ವಾರ್ಥದಿಂದ ಸೇವೆಯನ್ನು ಮಾಡಿದಾಗ ಮಾತ್ರ ತೀರ್ಥಯಾತ್ರೆಯನ್ನು ಮಾಡಿದಷ್ಟು ಫಲವು ದೊರೆಯುತ್ತದೆ. ಮನುಜನು ತನ್ನ ಘಾತಕತನವನ್ನು ಬಿಟ್ಟಾಗ ಮಾತ್ರ ನಿರಂತರವಾಗಿ ಗೀತೆಯನ್ನು ಓದಿದಷ್ಟು ಫಲವು ದೊರೆಯುತ್ತದೆ.
"ತಂದೆತಾಯಿಗಳನ್ನು ನೋಯಿಸುವವನು ತೀರ್ಥಯಾತ್ರೆ ಮಾಡಿದರೂ ಯಾವುದೇ ಫಲ ದೊರೆಯುವುದಿಲ್ಲ" ಎಂಬುದನ್ನು ಈ ವಾಕ್ಯದಲ್ಲಿ ಪುರಂದರದಾಸರು ಸ್ವಾರಸ್ಯಪೂರ್ಣವಾಗಿ ಹೇಳಿದ್ದಾರೆ.

**XI. ಕೆಳಗಿನ ಪ್ರಶ್ನೆಗಳಿಗೆ ಎಂಟು ಅಥವಾ ಹತ್ತು ವಾಕ್ಯಗಳಲ್ಲಿ ಉತ್ತರ ಬರೆಯಿರಿ.** **2*3=6**

| | |
|---|---|
| ಉತ್ತರದ ಅಂಶಗಳನ್ನಾಧರಿಸಿ ಪ್ರತ್ಯಾಂಶಕ್ಕೆ | 2 ಅಂಕ |
| ಭಾಷಾ ಶೈಲಿ – ಪದಬಂಧ | 1 ಅಂಕಗಳು |
| ಒಟ್ಟು | 3 ಅಂಕಗಳು |

**25. ಮುದ್ದಣನು ಪರಿಹಾಸ ಮಾಡಿದನೆಂದು ಮನೋರಮೆಯು ಹೇಳಲು ಕಾರಣವೇನು?**

ಮುದ್ದಣನು ತನ್ನಂತಹ ಕವಿಗಳಿಗೆ ಒಲಿದಿರುವ ಮಂತ್ರ ಶಕ್ತಿಯ ಬಗ್ಗೆ ಹೇಳಿದಾಗ ಮನೋರಮೆಯು ಮುದ್ದಣನಿಗೆ ಒಲಿದ ಮಂತ್ರ ಯಾವುದು? ಅದರ ಮಹಿಮೆ ಏನು ಎಂದು ತಿಳಿದುಕೊಳ್ಳಲು ಬಯಸುತ್ತಾಳೆ. ಆಗ ಅವಳನ್ನು ಮುದ್ದಣನು ಕಾಡಿಸಿ, ಬೇಡಿಸಿ, ಯಾರಿಗೂ ಎಂದಿಗೂ ಹೇಳಬಾರದು ಎಂದು ಕುಲದೇವರ ಮೇಲೆ ಆಣೆ ಇಟ್ಟು, ಭಾಷೆ ತೆಗೆದುಕೊಂಡು, ಮರೆತು ಬೇರೆಯವರಲ್ಲಿ ಹೇಳಿದೆಯಾದರೆ ನಮ್ಮಂತವರ ಬಾಳು ಹಾಳಾಗುತ್ತದೆ ಎಂದೆಲ್ಲ ಹೇಳಿ, ಅವಳಲ್ಲಿ ಬಹಳ ಕುತೂಹಲ ಮೂಡಿಸುತ್ತಾನೆ. ನಂತರ **'ಭವತಿ ಭಿಕ್ಷಾಂ ದೇಹಿ'** ಎಂಬುದು ಕವಿಗಳಿಗೆ ಸಿದ್ಧಿಸಿದ ಸಪ್ತಾಕ್ಷರೀ ಮಂತ್ರ ಎಂದು ಹೇಳುತ್ತಾನೆ. ಆಗ ಅವಳು "ಮುದ್ದಣನು ತನ್ನನ್ನು ಪರಿಹಾಸ ಮಾಡಿದನು; ಅವನೊಬ್ಬ ಹಾಸ್ಯಗಾರ" ಎಂದು ಹೇಳುತ್ತಾಳೆ.

**ಅಥವಾ**

**ಮುದ್ದಣನಿಗೆ ಒಲಿದ ಮಂತ್ರವನ್ನು ತಿಳಿದುಕೊಳ್ಳುವ ವಿಚಾರದಲ್ಲಿ ಗಂಡ–ಹೆಂಡಿತಿಯರ ನಡುವೆ ನಡೆದ ಸಂಭಾಷಣೆಯನ್ನು ನಿಮ್ಮ ಮಾತುಗಳಲ್ಲಿ ಬರೆಯಿರಿ.**

ಮುದ್ದಣನು ನಮ್ಮಂತಹ ಕವಿಗಳಿಗೆ ಭೂಷಣ ಪ್ರಾಯವಾದ ಮಂತ್ರಶಕ್ತಿ ಕೈವಶವಾಗಿದೆ ಎಂದು ಹೇಳುತ್ತಾನೆ. ಮನೋರಮೆಯು ಮುದ್ದಣನಿಗೆ ಒಲಿದ ಮಂತ್ರ ಯಾವುದು? ಅದರ ಮಹಿಮೆ ಏನು ಎಂದು ತಿಳಿದುಕೊಳ್ಳಲು ಬಯಸುತ್ತಾಳೆ. ಆಗ ಅವಳನ್ನು ಮುದ್ದಣನು ಕಾಡಿಸಿ, ಬೇಡಿಸಿ, ಯಾರಿಗೂ ಎಂದಿಗೂ ಹೇಳಬಾರದು ಎಂದು ಕುಲದೇವರ ಮೇಲೆ ಆಣೆ ಇಟ್ಟು, ಭಾಷೆ ತೆಗೆದುಕೊಂಡು, ಮರೆತು ಬೇರೆಯವರಲ್ಲಿ ಹೇಳಿದೆಯಾದರೆ ನಮ್ಮಂತವರ ಬಾಳು ಹಾಳಾಗುತ್ತದೆ ಎಂದೆಲ್ಲ ಹೇಳಿ, ಅವಳಲ್ಲಿ ಬಹಳ ಕುತೂಹಲ ಮೂಡಿಸುತ್ತಾನೆ. ನಂತರ **'ಭವತಿ ಭಿಕ್ಷಾಂ ದೇಹಿ'** ಎಂಬುದು ಕವಿಗಳಿಗೆ ಸಿದ್ಧಿಸಿದ ಸಪ್ತಾಕ್ಷರೀ ಮಂತ್ರ ಎಂದು ಹೇಳುತ್ತಾನೆ. ಆಗ ಅವಳು "ಮುದ್ದಣನು ತನ್ನನ್ನು ಪರಿಹಾಸ ಮಾಡಿದನು; ಅವನೊಬ್ಬ ಹಾಸ್ಯಗಾರ" ಎಂದು ಹೇಳುತ್ತಾಳೆ.

**26. ಗೆಳೆತನ ಇಹಲೋಕಕಿರುವ ಅಮೃತ ಹೇಗೆ? ತಿಳಿಸಿ.**

ಜೀವನದ ಅನಂತ ತಾಳಲಾಗದ ನೋವುಗಳನ್ನು, ಕಷ್ಟಗಳನ್ನು, ಅದರ ಕಾವುಗಳನ್ನು ಮೌನದಲ್ಲಿ ನುಂಗಿರುವ ಕವಿಗೆ ಗೆಳೆತನವು ಒಂದು ವಿಶಾಲವಾದ ಆಲದ ಮರದಂತೆ ಗೋಚರಿಸುತ್ತದೆ. ಅದರ ತಂಪಾದ ನೆರಳಿನಲ್ಲಿ ತಂಗಲು ಬಯಸುತ್ತಾರೆ. ಗೆಳೆತನದಲ್ಲಿ ವಂಚನೆ ಇಲ್ಲ, ಚಂಚಲತೆ ಇಲ್ಲ, ಮೇಲು ಕೀಳುಗಳೆಂಬ ಭೇದವಿಲ್ಲ, ಅಹಂಕಾರವಿಲ್ಲ. ಒಬ್ಬರ ಮೇಲೊಬ್ಬರಿಗೆ ದ್ವೇಷವಿಲ್ಲ. ಸಣ್ಣತನದಿಂದ ಯೋಚಿಸುವುದಿಲ್ಲ ಮತ್ತು ಸಂಕೋಚಗಳೆಂಬ ದುರ್ಗುಣಗಳು ಇಲ್ಲವಾದ್ದರಿಂದ ಗೆಳೆತನವು ಇಹಲೋಕಕಿರುವ ಅಮೃತವೆಂದು ಕವಿಗಳು ಹೇಳಿದ್ದಾರೆ.

**ಅಥವಾ**

**ಗೆಳೆಯರ ಮನಸ್ಸಿನ ಭಾವನೆ ಹೇಗಿರುತ್ತದೆ? ವಿವರಿಸಿ.**

ಗೆಳೆಯರ ಮನಸ್ಸಿನಲ್ಲಿ ವಂಚನೆ ಇಲ್ಲ, ಚಂಚಲತೆ ಇಲ್ಲ, ಮೇಲು ಕೀಳುಗಳೆಂಬ ಭೇದವಿಲ್ಲ, ಅಹಂಕಾರವಿಲ್ಲ. ಒಬ್ಬರ ಮೇಲೊಬ್ಬರಿಗೆ ಸ್ವಲ್ಪವು ದ್ವೇಷವಿಲ್ಲ. ಸಣ್ಣತನದಿಂದ ಯೋಚಿಸುವುದಿಲ್ಲ ಮತ್ತು ಸಂಕೋಚವೆಂಬುದು ಮೊದಲೇ ಇರುವುದಿಲ್ಲ. ಗೆಳೆಯರ ಮನವು ಬಾನಿನಷ್ಟು ಅಗಲವಾಗಿದೆ, ಎದೆಯು ತಿಳಿಯಾದ ಕಲ್ಮಶವಿರದ ಕೊಳದಂತೆ ಇದೆ. ಭಾವವು ಶುದ್ಧವಾದ ಸ್ಫಟಿಕದಂತೆ ಮತ್ತು ಬೆಳದಿಂಗಳಿನಂತೆ ಇದೆ. ಇವೆ ಗೆಳೆಯರ ಮನಸ್ಸಿನಲ್ಲಿ ಇರುವ ಭಾವನೆಗಳು.

**XII.** ಕೆಳಗಿನ ಗದ್ಯಭಾಗವನ್ನು ಮನಸ್ಸಿನಲ್ಲಿ ಓದಿಕೊಂಡು, ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರ ಬರೆಯಿರಿ. **1*4=4[2+2]**

**(ಅಂಶಗಳನ್ನಾಧರಿಸಿ ಪ್ರತಿ ಸರಿಯುತ್ತರಕ್ಕೆ 1 ಅಂಕಗಳು)**

**27.** **ಪ್ರಶ್ನೆಗಳು :**

**27 (ಅ) ಅಂಬೇಡ್ಕರ್ ಅವರಿಗೆ ವೇಳೆ ಎಂದರೇನು?**

ಅಂಬೇಡ್ಕರ್ ಅವರಿಗೆ ವೇಳೆ ಎಂದರೆ ಜ್ಞಾನಾರ್ಜನೆ.

**27 (ಆ) ಅಂಬೇಡ್ಕರ್ ಅವರ ಜ್ಞಾನದಾಹ ಯಾವ ರೀತಿಯಲ್ಲಿತ್ತು?**

ಅಂಬೇಡ್ಕರ್ ಅವರ ಜ್ಞಾನದಾಹ ಪುರಾತನ ಕಾಲದ ಚಕ್ರವರ್ತಿಯೊಬ್ಬನ ಸಾಮ್ರಾಜ್ಯ ದಾಹದಂತಿತ್ತು.

**XIII.** ಯಾವುದಾದರೂ ಒಂದಕ್ಕೆ ಕೊಟ್ಟಿರುವ ಮಾಹಿತಿಯನ್ನು ಆಧರಿಸಿ ಪತ್ರ ಬರೆಯಿರಿ. **1*4=4**

| | |
|---|---|
| ಇಂದ, ಗೆ, ಸಂಬೋಧನೆ, ವಿಷಯ | 1 ಅಂಕ |
| ಪತ್ರದ ಒಡಲು – ವಿಷಯ ನಿರೂಪಣೆ | 2 ಅಂಕಗಳು |
| ಮುಕ್ತಾಯ, ಇಂತಿ, ಸ್ಥಳ, ದಿನಾಂಕ | 1 ಅಂಕ |
| ಒಟ್ಟು | 4 ಅಂಕಗಳು |

**28.** ನಿಮ್ಮನ್ನು ಮೈಸೂರಿನ ಕುವೆಂಪು ನಗರದ ಸರ್ಕಾರಿ ಪ್ರೌಢಶಾಲೆಯ 'ಕಮಲ' ಎಂದು ಭಾವಿಸಿಕೊಂಡು, ನಿಮ್ಮ ಅಣ್ಣನ ಮದುವೆಗೆ ಹೋಗಲು 5 ದಿನಗಳ ರಜೆಯನ್ನು ಕೋರಿ, ನಿಮ್ಮ ಮುಖ್ಯಶಿಕ್ಷಕರಿಗೆ ರಜಾಪತ್ರವನ್ನು ಬರೆಯಿರಿ.

ಇಂದ

ಕಮಲ<br>
8 ನೆಯ ತರಗತಿ<br>
ಸರ್ಕಾರಿ ಪ್ರೌಢಶಾಲೆ<br>
ಕುವೆಂಪು ನಗರ<br>
ಮೈಸೂರು

ದಿನಾಂಕ : 10–02–2025<br>
ಸ್ಥಳ : ಮೈಸೂರು

ಇವರಿಗೆ

ಮಾನ್ಯ ಮುಖ್ಯ ಶಿಕ್ಷಕರು<br>
ಸರ್ಕಾರಿ ಪ್ರೌಢಶಾಲೆ<br>
ಕುವೆಂಪು ನಗರ<br>
ಮೈಸೂರು

ಮಾನ್ಯರೇ,

ವಿಷಯ : ನಮ್ಮ ಅಣ್ಣನ ಮದುವೆಗೆ ಹೋಗಲು 5 ದಿನಗಳ ರಜೆಯನ್ನು ಕೋರಿ ಮನವಿ.

ದಿನಾಂಕ : 01–03–2025 ರಿಂದ 05–03–2025 ರವರೆಗೆ ಮಂಡ್ಯದಲ್ಲಿ ನಮ್ಮ ಅಣ್ಣನ ಮದುವೆಯು ಇರುತ್ತದೆ. ನಾನು ಈ ಮದುವೆಯ ಕಾರ್ಯಕ್ರಮದಲ್ಲಿ ಭಾಗವಹಿಸಬೇಕಾಗಿರುವುದರಿಂದ 5 ದಿನಗಳು ಶಾಲೆಗೆ ಬರಲು ಸಾದ್ಯವಾಗುವುದಿಲ್ಲ. ಆದ್ದರಿಂದ ತಾವು ನನಗೆ ದಿನಾಂಕ : 01–03–2025 ರಿಂದ 05–03–2025 ರವರೆಗೆ 5 ದಿನಗಳ ರಜೆಯನ್ನು ನೀಡಬೇಕೆಂದು ಈ ಮೂಲಕ ಸವಿನಯದಿಂದ ಕೇಳಿಕೊಳ್ಳುತ್ತೇನೆ.

ವಂದನೆಗಳೊಡನೆ

ತಮ್ಮ ನಂಬುಗೆಯ<br>
ಸಹಿ/–<br>
(ಕಮಲ)

**ಹೊರ ವಿಳಾಸ**

| ಇಂದ | ಇವರಿಗೆ |
|---|---|
| **ಕಮಲ<br>8 ನೆಯ ತರಗತಿ<br>ಸರ್ಕಾರಿ ಪ್ರೌಢಶಾಲೆ<br>ಕುವೆಂಪು ನಗರ<br>ಮೈಸೂರು** | **ಮಾನ್ಯ ಮುಖ್ಯ ಶಿಕ್ಷಕರು<br>ಸರ್ಕಾರಿ ಪ್ರೌಢಶಾಲೆ<br>ಕುವೆಂಪು ನಗರ<br>ಮೈಸೂರು** |

**ಅಥವಾ**

**ಕೆಳಗಿನ ಯಾವುದಾದರೂ ಒಂದು ವಿಷಯದಲ್ಲಿ ಹದಿನೈದು ವಾಕ್ಯಗಳಿಗೆ ಕಡಿಮೆಯಿಲ್ಲದಂತೆ ಪ್ರಬಂಧ ಬರೆಯಿರಿ.**

| | |
|---|---|
| **ಪ್ರಸ್ತಾವನೆ / ಪೀಠಿಕೆ / ವಿಷಯ ಪ್ರವೇಶ** | **1 ಅಂಕ** |
| **ಒಡಲು / ಸಮರ್ಥ ವಿವರಣೆಯೊಂದಿಗೆ ವಿಷಯ ನಿರೂಪಣೆ** | **2 ಅಂಕಗಳು** |
| **ಉಪಸಂಹಾರ / ಮುಕ್ತಾಯ / ವಿಷಯ ಸಮಾಪಿ** | **1 ಅಂಕ** |
| **ಒಟ್ಟು** | **4 ಅಂಕಗಳು** |

**ರಾಷ್ಟ್ರೀಯ ಹಬ್ಬಗಳು**

**ಪ್ರಸ್ತಾವನೆ :-** ದೇಶ ಪ್ರೇಮ ಹಾಗೂ ರಾಷ್ಟ್ರೀಯ ಭಾವೈಕ್ಯತೆಯನ್ನು ಮೂಡಿಸುವಲ್ಲಿ ರಾಷ್ಟ್ರೀಯ ಹಬ್ಬಗಳು ಮಹತ್ತ್ವದ ಸ್ಥಾನವನ್ನು ವಹಿಸುತ್ತವೆ. ರಾಷ್ಟ್ರೀಯ ಹಬ್ಬಗಳು ರಾಷ್ಟ್ರದ ಜನರಲ್ಲಿರುವ ಜಾತಿ, ಮತ, ವರ್ಣ, ಧರ್ಮ, ಭಾಷೆ, ಪ್ರಾಂತ್ಯ ಭೇದಭಾವಗಳನ್ನು ಹೋಗಲಾಡಿಸಿ ನಾವೆಲ್ಲರೂ ಒಂದೇ ಎಂಬ ರಾಷ್ಟ್ರೀಯ ಭಾವೈಕ್ಯತೆಯನ್ನು ಮೂಡಿಸುತ್ತವೆ. ಆದ್ದರಿಂದ ರಾಷ್ಟ್ರೀಯ ಹಬ್ಬಗಳನ್ನು ಬಹು ವಿಜೃಂಭಣೆಯಿಂದ ಆಚರಿಸಬೇಕು.

**ವಿಷಯ ನಿರೂಪಣೆ :-** ನಮ್ಮ ಭಾರತ ದೇಶದಲ್ಲಿ ಆಗಸ್ಟ್ 15 ರ ಸ್ವಾತಂತ್ರ್ಯೋತ್ಸವ, ಜನವರಿ 26 ರ ಗಣರಾಜ್ಯೋತ್ಸವ, ಅಕ್ಟೋಬರ್ 2 ಮಹಾತ್ಮ ಗಾಂಧೀ ಜಯಂತಿ ಮೊದಲಾದ ದಿನಗಳನ್ನು ರಾಷ್ಟ್ರೀಯ ಹಬ್ಬಗಳು ಎಂದು ಆಚರಿಸಲಾಗುತ್ತದೆ. ರಾಷ್ಟ್ರದಲ್ಲಿ ವಾಸಿಸುವ ಜನರೆಲ್ಲರೂ ಒಗ್ಗೂಡಿ ಆಚರಿಸಬೇಕಾದ ಹಬ್ಬದ ದಿನಗಳಿವು. ನಮ್ಮ ದೇಶದ ಸ್ವಾತಂತ್ರ್ಯಕ್ಕಾಗಿ, ರಕ್ಷಣೆಗಾಗಿ, ಏಳಿಗೆಗಾಗಿ ದುಡಿದ ಮಹನೀಯರುಗಳನ್ನು ಸ್ಮರಿಸುವ ದಿನಗಳಿವು. ನಮ್ಮ ಹಿರಿಯರ ತ್ಯಾಗ, ಬಲಿದಾನಗಳ ಮಹತ್ತ್ವವನ್ನು ಅರಿಯುವ ದಿನಗಳಿವು. ಮುಂದಿನ ಜನಾಂಗಕ್ಕೆ ನಮ್ಮ ದೇಶದ ಸಮಗ್ರತೆ ಮತ್ತು ಏಕತೆಯನ್ನು ಕಾಪಾಡುವಂತೆ ದೀಕ್ಷೆ ಕೊಡುವ ದಿನಗಳಿವು. ರಾಷ್ಟ್ರಭಕ್ತರ ಜೀವನ, ಸಾಧನೆಗಳನ್ನು ಮಕ್ಕಳಿಗೆ ತಿಳಿಸಿ ಹೇಳುವ ದಿನಗಳಿವು. ನಮ್ಮ ದೇಶವನ್ನು ಸಂರಕ್ಷಣೆ ಮಾಡುವ ವೀರ ಸೈನಿಕರಿಗೆ ಗೌರವ ಸೂಚಿಸುವ ದಿನಗಳಿವು. ಪ್ರತಿಯೊಬ್ಬ ಭಾರತೀಯನು ಸಂಭ್ರಮದಿಂದ ಭಾಗವಹಿಸಿ ತನ್ನ ದೇಶಪ್ರೇಮವನ್ನು ಜಗತ್ತಿಗೆ ಸಾರುವ ಸುದಿನಗಳಿವು. ರಾಷ್ಟ್ರೀಯ ಹಬ್ಬಗಳು ಶಾಲಾಕಾಲೇಜು, ಸರ್ಕಾರಿ ಕಚೇರಿಗಳಲ್ಲಿ ಮಾತ್ರ ಆಚರಿಸುವ ಹಬ್ಬಗಳಾಗಬಾರದು. ಪ್ರತಿ ಮನೆ, ಗ್ರಾಮ, ಪಟ್ಟಣ, ನಗರಗಳಲ್ಲಿ ಜಾತಿ, ಮತ, ವರ್ಣ, ಧರ್ಮ, ಭಾಷೆ, ಪ್ರಾಂತ್ಯ ಭೇದಭಾವಗಳಿಲ್ಲದೆ ಆಚರಿಸುವ ಪ್ರಮುಖ ಹಬ್ಬವಾಗಬೇಕು. ಆಗ ಮಾತ್ರ ನಾವೆಲ್ಲರೂ ಒಂದೇ ಎಂಬ ರಾಷ್ಟ್ರೀಯ ಭಾವೈಕ್ಯತೆಯು ಮೂಡಲು ಸಾಧ್ಯವಾಗುತ್ತದೆ.

**ಉಪಸಂಹಾರ :-** ಒಂದೆಡೆ ಸೇರಿ ಪರಸ್ಪರ ಶುಭಾಶಯಗಳನ್ನು ವಿನಿಮಯ ಮಾಡಿಕೊಳ್ಳಬೇಕು. ಪ್ರತಿಯೊಬ್ಬರ ಮನೆ ಮನಗಳಲ್ಲೂ ಹಬ್ಬದ ಸಂಭ್ರಮವಿರಬೇಕು. ನಾವು ಆಚರಿಸುತ್ತಿರುವ ದಿನಗಳ ಮಹತ್ತ್ವದ ಬಗ್ಗೆ ಎಲ್ಲರಿಗೂ ಅರಿವು ಮೂಡಿಸಬೇಕು. ನಮ್ಮ ದೇಶದ ಸ್ವತಂತ್ರ ಸೇನಾನಿಗಳ ಬಗ್ಗೆ ಅಭಿಮಾನ ಮೂಡುವಂತಹ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಬೇಕು. ಪ್ರತಿ ಮನೆ, ಗ್ರಾಮ, ಪಟ್ಟಣ, ನಗರಗಳಲ್ಲಿ ಇದು ನಮ್ಮ ಹಬ್ಬವೆಂಬ ಸಂಭ್ರಮವಿರಬೇಕು ಎಂಬುದು ನನ್ನ ಅಭಿಪ್ರಾಯವಾಗಿದೆ.

************************************